ಆಫೀಸಿನ ಹೆಸರು.	ನಂಬರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡಿಪತ್ರ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ಅಡಿಪತ್ರ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ಸ್ವಭಾವ ಮತ್ತು ಕಿಮ್ಮತ್ತು.
ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸ್.	ತಿರಸ್ಕರಿಸಿದ್ದು.	ಮೈಸೂರು ಮಂಡಿಮಹಲ್‌ದಲ್ಲಿರುವ ಜೋರಯ್ಯನ ಮಗ ಸಿದ್ದಯ್ಯ ಈತನ ಮಗ ಬೋರಣ್ಣ ಸಹ.	ಮೈಸೂರು ಬನವನಮಹಲಿಯಲ್ಲಿರುವ ರಾಮರಾಯರ ಮಕ್ಕಳು ಧನಾಭಿವೃದ್ಧಿ ಬ್ಯಾಂಕ್ ವಿಜಿಂಟ್ ಕೀಪಗಿರಿರಾವ್.	22 1 85	26 5 85	ನಾವುಗಳು ಧನಾಭಿವೃದ್ಧಿ ಬ್ಯಾಂಕಿಗೆ ಕೊಡಬೇಕಾದ ಮೊಬಲಗು ಪೈಕಿ ಕೊಟ್ಟಿರುವದು ಜಾತಾ ಮೊಬಲಗು 282-3-3ನ್ನು ಒಂದು ತಿಂಗಳ ವಳಗೆ ಕೊಡುತ್ತೇವೆಂದು ಮತ್ತು ಮೇಲ್ಕಂಡ ಮೊಬಲಗ್ಕೆ ಮಂಡಿ ಮಹಲೆಯಲ್ಲಿರುವ ಮನೆಯನ್ನು ಆಧಾರಮಾಡಿರುವದಾಗಿ.
	ಡಿಟೋ	ಮೈಸೂರು ಲಷ್ಕರ್ ಮಹಲೆಯಲ್ಲಿರುವ ಕಾವೇರಿ ಕಟ್ಟರ ಮಗ ಜರ್ಮಿ ಜೀವನ ಮಾಡುವ ಸುಬ್ಬಾನಾಯಡು.	ಮೈಸೂರು ಲಷ್ಕರ್ ಮಹಲೆಯಲ್ಲಿರುವ ದಾಸಪ್ಪನ ಮಗ ವೆಂಕಟಪ್ಪ.	23 4 85	10 10 85	ಮೈಸೂರು ಲಷ್ಕರ್ ಮಹಲೆಯಲ್ಲಿರುವ ಮನೆಯನ್ನು ಆಧಾರ ಮಾಡಿ 60 ರೂಪಾಯಿಗಳು ತಗದುಕೊಂಡಿರುವದನ್ನು ಶೇಕಡಾ ಮಾಹೆ 1ಕ್ಕೆ ಒಂದು ರೂಪಾಯಿ ಪೇರೆ ಅನಲು ಬಡ್ಡಿ ಸಹ ಯೆರಡು ವಿಸ್ತಾಗಿ ಪಾವತಿ ಹೊಡುವದಾಗಿ.

ಯಂ. ಆಂಗಾಜೆರಾವ್,
ರಿಜಿಸ್ಟ್ರಾರ್.

ತಾರೀಖು 20ನೇ ಸೆಪ್ಟೆಂಬರ್ 1889.

ಸಕಲನಜಗಳಿಗೂ ಯಿದರಿಂದ ತಿಳಿಯಪಡಿಸುವದೇನಂದರೆ, ಮೈಸೂರಿನಲ್ಲಿ ಹೊಸದಾಗಿ ತಯಾರಾಗತಕ್ಕ ಶಿಲೇದಾರ್ ಲೈಕ್ ಕಾಮುಗಾರಿ ಕಂಟ್ರಾಕ್ಟ್‌ಗಾಗಿ ಮೊಹರಿನಿಂ ಬರುವ ದರಖಾಸ್ತುಗಳನ್ನು ಮೈಸೂರು ಡಿವಿಜ್ ಯಗ್ಜಿಕ್ಯೂಟಿವ್ ಯಿಂಜ್ಞನಿಯರವರ ಆಫಿಸಿನಲ್ಲಿ ಬರುವ ಅಕ್ಟೋಬರ್ 9ನೇ ತಾರೀಖು ಪರಿಯಂತರ ಹಿಡಿಯಲ್ಪಡುವದು.

ಸುಮಾರು ಅಂದಾಜು ಪರಿಮಾಣವನ್ನು ಈ ಕೆಳಗೆ ವಿವರಿಸಿಯಿದೆ. ಈ ಪರಿಮಾಣವು ಗೊತ್ತಾದ್ದಲ್ಲ ಕಾಮುಗಾರಿಯು 1891ನೇ ಇಸವಿ ಜೂನ್ ಆಖೈರಿನಲ್ಲಿ ಪೂರೈಸತಕ್ಕದ್ದು.

2. ಪ್ಲಾನ್ ಅಂದಾಜು ಯಿತರ ಸಂಗತಿ ಸಹ ದಿವಿ 11 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ವರಿಗೆ ಮೈಸೂರು ಡಿವಿಜ್ ಯಗ್ಜಿಕ್ಯೂಟಿವ್ ಇಂಜನಿಯರ್ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಯಗ್ಜಿಕ್ಯೂಟಿವ್ ಇಂಜನಿಯರ್ ಆಫಿಸಿನಲ್ಲಿ ಪಡಿಯ ಬಹುದು. ತರಹೇವಾರಿಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡಬಹುದೋ ಅದನ್ನು ತೋರಿಸುವ ಕೆಳಗೆ ಕೊಟ್ಟಿಯಿರುವ ಫಾರಂನಂತೆ ಬಂದು ಪಟ್ಟಿ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳೂ ಗವರ್ನಮೆಂಟ್ ಪ್ರೋನೋಟ್ ಮೂಲಕವಾಗಲಿ ನಗದುಗಲಿ 50 ರೂಪಾಯಿ ಡಿಪಾಜಿಟ್ಟಿನೊಡಗೂಡಿ ಯಿರಬೇಕು ಮತ್ತು ಮೈಸೂರಿನಲ್ಲಿ ಕಟ್ಟಲ್ಪಡುವ ಶಿಲೇದಾರ್ ಲೈಕ್ ಕಾಂಗಾರಿ ಕಂಟ್ರಾಕ್ಟ್ ದರಖಾಸ್ತು ಯಂತ ಲಿಫಾಫೆ ಮೇಲೆ ಬರದು ಯಿರಬೇಕು ಹೀಗೆ ಯಿರದೆ ಬರುವ ದರಖಾಸ್ತುಗಳನ್ನು ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನು ಅಂಗೀಕರಿಸತಕ್ಕದ್ದು ಚೀಫ್ ಯಿಂಜನಿಯರವರದಾಗಿ ಯಿಧೆ ಅವರು ಕಂಟ್ರಾಕ್ಟರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೂ ಅಥವಾ ದರಖಾಸ್ತನ್ನು ತಿರಸ್ಕರಿಸಿದ್ದಕ್ಕೆ ಕಾರಣವನ್ನು ಹೇಳುವದಕ್ಕೂ ಬದ್ಧರಾಗಿಯಿವಲ್ಲವು.

6. ಯಾವ ದರಖಾಸ್ತು ಮಂಜೂರು ಮಾಡಲ್ಪಡುವದೋ ಅಂಥಾ ದರಖಾಸ್ತುದಾರನ ಹೆಸರನ್ನು ಯಗ್ಜಿಕ್ಯೂಟಿವ್ ಯಿಂಜನಿಯರ್ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಕ್ರಮೇಣ ಚಿಕಟಾಯಿಸಲ್ಪಡುವದು. ದರಖಾಸ್ತು ಮಂಜೂರಾಯಿತೇ ಅಥವಾ ಅನಂಗೀಕಾರವಾಯಿತೇ ಯಂದು ಬರುವ ಪ್ರಶ್ನೆಗಳಿಗೆ ಜವಾಬು ದೊರಿಯಲಾರದು.

7. ದರಖಾಸ್ತು ಮಂಜೂರು ಮಾಡಿದ 8 ರೋಜುಗಳವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಹಾಜರಾಗಿ ಕಂಟ್ರಾಕ್ಟ್ ಬಾಂಡನ್ನು ಬರದು ಕೊಡತಕ್ಕದ್ದು. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದಾದ ಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನು ಹೋಗಲಾಡಿಕೊಳ್ಳುವನು.

8. ದರಖಾಸ್ತುಗಳ ಪೈಕಿ ಒಂದು ದರಖಾಸ್ತು ಅಂಗೀಕಾರವಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸು ಮಾಡಲ್ಪಡುವದು.

ವಿವರ.	ಗೆ.	ದರ.	ಮೊತ್ತಾವ ಪರಿಮಾಣ.
ಮಟ್ಟೀಶೋಧಿ	ಸಲೆಗಜ		635
ಕಾಡುಕಲ್ಲು ಮೊಂಣಿನಿಂದ ಮಾಯಾಭತ್ರ್	ಡಿಟೋ		635
ಸುಟ್ಟಯಿಟ್ಟಿಗೆ ಪಾಂಣು	ಸಲೆಅಡಿ		38393
ಸುಟ್ಟಯಿಟ್ಟಿಗೆ ನುಂಣ	ಡಿಟೋ		2497
ಕಲ್ಲುಹಪ್ಪಡಿ	ಚದರ ಅಡಿ		4001
ಕದಗಳು ಮತ್ತು ಕಿಟಕಿಗಳು	ಡಿಟೋ		1340
ಯಿಟ್ಟಿಗೆ ಗಾಪೆ ಪಿಜಿಪಟ್ಟು	ಲಾಂಬಿ ಅಡಿ		1573
ನುಂಣದ ಸಿಮಗಾರ	ಚದರ		6·40
ಟಾಡುಹಾಮುವದು	ಡಿಟೋ		29·95
ಹೊನ್ನೇ ಮರದಕೆಲಸ	ಸಲೆಅಡಿ		456
ಹೊನ್ನೇ ಮರದ ರಿಪೋಸಪಟ್ಟು ಮಂಗಳೊರು ಅವ್ವಲ್ ಕ್ವಾಸಿನ ಪಂಚು, ಮಳೆ ಬಗ್ಗೆರೇ ಕಂಬ್ಲು ಟ್ರಸಿನಿಂದ ಮೇಲ್ ಛಾವಣಿ	ಚದರ		114·46
ಸೂಪಿಪಟ್ಟ್	ಲಾಂಬಿಅಡಿ		79
ಫಿನಿಯಲ್ ಯಾನೆ ಸೊರಪಟ್ಟಿ ಪುಷ್ಪವ ಗಾರಿ ಕಂಬಿ ..	ಅದರು		2
ಬಳಕು ಹೆಂಚು	ಡಿಟೋ		80
ಸುಂಣಾಮ ಪರಟು ಗಿಲಾವು	ಚದರ		215·81
ಪಾಂಣೆನಗಿಲಾವು	ಡಿಟೋ		334·80
ಗ್ರಾವಲ್‌ನಿಂದ ನೆಲಪಟ್ಟಣಿ	ಸಲೆಗಜ		119
ಸುಣ್ಣ ತೊಳೆಮುವದು	ಚದರ		334·80
ಬಂಣ ಹಾಕುವದು	ಡಿಟೋ		215·81
ನೆಲವರಿಮಾಡಿ ಗ್ರಾವಲ್‌ಹಾಕಿ ರೋಡ್ ತಯಾರ್ಮಾಡುವದಕ್ಕೆ ಒತ್ತ ರೂಪಾಯಿಗಳು	..	..	..

ವಿ. ಹೆಚ್. ಕ್ಯಾ,
ಯಗ್ಜಿಕ್ಯೂಟಿವ್ ಯಿಂಜನಿಯರ್,
ಮೈಸೂರು ಡಿವಿಜ್ಞ.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಫಾರೆಸ್ಟ್ ಇಲಾಖಾ.

ತಾರೀಖು 16ನೇ ಸಪ್ಟಂಬರ್ 1889.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ಕಾಣಿಸಿರುವ ಡಿಪೋಗಳಿಗೆ ಕಂಟ್ರಾಕ್ಟು ಮೂಲಕ ನಾಟು ಮಗ್ಗೆರೆ ಸಾರ್ಮ ಜಮಾಯಿಸುವದಕ್ಕೆ ಈ ತಾರೀಖು ಲಾಗಾಯತು ಅಕ್ಟೋಬರ್ ತಾರೀಖು 1ರ ವರಿಗೆ ಟೆಂಡರ್‌ಗಳು ಅಂಗೀಕರಿಸಲ್ಪಡುತ್ತದೆ.

ಡಿಪೋ ಹೆಸರು.		ಡಿಪೋ ಹೆಸರು.	
1	ಶಿವಮೊಗ್ಗಾ	5	ಚಿಟ್ಟಿಮನೆ ಸಮುದ್ರಹಳ್ಳಿ ಟೆಂಕಪೆರಿ
2	ಆಯನೂರು	6	ತೀರ್ಥಾಪುರೆ ..
3	ಚನ್ನಗಿರಿ	7	ತಿರುಳಕೊಪ್ಪ ..
4	ಉಬ್ರಾಣಿ		

2. ಟೆಂಡರ್‌ಗಳು ಯಿಂಥಾ ಡಿಪೋಗಳಿಗೆ ನಾಟೂ ಮಗ್ಗೆರೆ ಜಮಾಯಿಸತಕ್ಕ ಬಗ್ಗೆ ಟೆಂಡರುಯಂಮು ಲಿಖಾಫೆಗಳ ಮೇಲೆ ಬರೆದು ಯಿರತಕ್ಕದ್ದು.

3. ಪ್ರತಿ ಒಂದು ಡಿಪೋಕ್ಕೆ ಯಷ್ಟುನಾಟೂ ಮಗ್ಗೆರೆ ಜಮಾಯಿಸಬೇಕೆಂಬ ತಪಶೀಲ್ ಮತ್ತು ಯಾವ ಜಂಗಲಿಯಿಂದ ನಾಟು ಕತರಾಯಿಸಬೇಕು ಯಂಬುವದು ಮತ್ತು ಈ ವಿಷಯದಲ್ಲಿ ತಿಳಿಯಬೇಕಾದ ಇತರ ತಪಶೀಲ್‌ಗಳನ್ನು ಅಂದರೆ ಮುಚ್ಚಳಿಕೇ ಪರತ್ತುಗಳು ಮಗ್ಗೆರೆ ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟಂಟ್ ಕನಸರವೇಟರ್ ಸಾಹೆಬರವರ ಆಫಿಸಿನಲ್ಲಿ ನೋಟಿಸ್ ತಖ್ತೆಮೇಲೆ ನೋಡಿ ತಿಳಿದುಕೊಳ್ಳತಕ್ಕದ್ದು ಆಲ್ಲಿ ಯಷ್ಟು ಪಂಗಡಿಗಳೂ ತಿಳಿಸಲ್ಪಡುವದು.

4. ಟೆಂಡರುಗಳು ಸಮೇತ (100) ಒಂದು ನೂರು ರೂಪಾಯಿಗಳನ್ನು ನಗದಾಗಲಿ ಕರ್ಣಾಟಕ ನೋಟ್ ಮೂಲಕವಾಗಿ ಆಗಲಿ ಠೇವಣಿ ಹಾಜರ್ ಮಾಡಬೇಕು, ತೇಜನೀ ಪೊಬಲಗು ಯಿಲ್ಲದೆ ಬರುವ ದರಖಾಸ್ತುಗಳನ್ನ ಅಂಗೀಕರಿಸಲ್ಪಡುವಿಲ್ಲವು, ಟೆಂಡರ್ ಅಂಗೀಕರಿಸದೆ ತಿರಸ್ಕರಿಸಲ್ಪಟ್ಟರೆ ಠೇವಣೀ ಪೊಬಲಗು ವಾಪಸು ಮಾಡಲ್ಪಡೀತು.